ಪಿ.ಡಬ್ಲ್ಯೂ: 01.

ದಿನಾಕ:15-02-2020 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿ ಪರ: ಶ್ರೀ ಸಿ ಸಿ ಎನ್ ವಕೀಲರವರಿಂದ:

ನಾನು ಹಾಗೂ ನನ್ನ ಹೆಂಡತಿ ಜಂಟಿಯಾಗಿ ಆರೋಪಿಯ ಗಂಡ ಸ್ವಯಂ ಕೃತ ಏಜೆಂಟ ಆಗಿರುವುದರಿಂದ ಅವರಿಗೆ ಪಿಗ್ಮಿ ಕಟ್ಟಿರುತ್ತೇವೆಂದರೆ ಸರಿ . ಸ್ವಯಂ ಕೃಷಿ ಸಂಘದ ಮುಖ್ಯ ನಿರ್ದೇಶಕರು ಮೋಸ ಮಾಡಿರುವುದರಿಂದ ಸದರಿ ಸಂಘ ಮುಚ್ಚುವುದೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ. ನಾವು ಕಟ್ಟಿದ ಪಿಗ್ಮಿ ಹಣಕ್ಕಾಗಿ ಸಂಘದವರು ರೂ. 38,514/- ಚೆಕ್ಕು ನಮ್ಮ ಹೆಂಡತಿ ಹೆಸರಿಗೆ ಕೊಟ್ಟಿದ್ದರು ಎಂದರೆ ಸರಿ . ಸ್ವಲ್ಪ ಸಮಯದ ನಂತರ ಸಾಕ್ಷಿಯ ಚೆಕ್ಕು ಕೊಟ್ಟಿರುವುದಿಲ್ಲ ನಗದು ಹಣ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಚೆಕ್ಕನ್ನು ನನ್ನ ಹೆಂಡತಿ ಎಸ್ ಬಿ ಎಮ್, ಚೆಲ್ಲಹಳ್ಳಿ ಶಾಖೆಗೆ ನಗಧೀಕರಣಕ್ಕಾಗಿ ಸಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ಚೆಕ್ಕು ನಗಧೀಕರಣವಾಗದೆ ವಾಪಸ್ಸು ಬಂದಿದೆ ಎಂದರೆ ಸರಿಯಲ್ಲ.

ಆರೋಪಿಯು ನಿಮ್ಮ ಹೆಂಡತಿಗೆ ರೂ.10,514/- ಗೆ ನೀಡಿದ್ದು ಸದರಿ ಚೆಕ್ಕನ್ನು ನೀವು ದುರುಪಯೋಗಪಡಿಸಿಕೊಂಡಿದ್ದು, ಈ ಪ್ರಕರಣವನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ರೂ.38,514/- ಹಣ ಬಂದ ನಂತರ ಈ ಚೆಕ್ಕನ್ನು ವಾಪಸ್ಸು ಕೊಡುತ್ತೇವೆಂದು ನಿಪಿ-1 ನ್ನು ಆರೋಪಿಯಿಂದ ಪಡೆದಿದ್ದು ಹಣ ಬಂದ ನಂತರ ಸಹ ಆರೋಪಿಗೆ ಕೊಡದೆ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಪೀರ್ಯಾಧಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಆರೋಪಿ ನಮ್ಮಿಂದ ಯಾವ ದಿನಾಂಕದಂದು ಹಣ ಪಡೆದಿರುತ್ತಾರೆಂದರೆ ಸಾಕ್ಷಿಯು ನಿಖರವಾಗಿ ದಿನಾಂಕವನ್ನು ಹೇಳಲು ಆಗುವುದಿಲ್ಲ ಆದರೆ 5 ನೇ ತಿಂಗಳು 2017 ರಂದು ಪಡೆದಿರುತ್ತಾಳೆಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಆರೋಪಿಗೆ ನೀಡಿರುವ ನೋಟಿಸಿನಲ್ಲಿ ಬರೆಸಿರುವುದಿಲ್ಲ,ಆದರೆ ಪಿರ್ಯಾಧಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ.

5 ನೇ ತಿಂಗಳು 2017 ರಂದು ನನ್ನ ಹತ್ತಿರ 2,00,000/- ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲು ಕೊಟ್ಟಿರುತ್ತೇನೆ. ಸದರಿ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ಆರೋಪಿ ಹಾಗೂ ಆರೋಪಿ ಗಂಡ ಮತ್ತು ನಾನು ಹಾಜರಿದ್ದೇವು. ನನಗೆ ವ್ಯವಸಾಯ ಹಾಗೂ ಚಿಲ್ಲರೆ ಅಂಗಡಿ ಬಿಟ್ಟು ಬೇರೆ ಆದಾಯವಿಲ್ಲ ಎಂದರೆ ಸರಿಯಲ್ಲ. ಮಿಲ್ಲು ಹಾಗೂ ಬೇಕರಿ ಅಂಗಡಿ ಹಾಗೂ ಹಿಂಡಿ ಅಂಗಡಿಗಳು ಇದ್ದ ಬಗ್ಗೆ, ನಾನು ಅದರಿಂದ ಆದಾಯ ಬರುತ್ತದೇಂದು

ತೋರಿಸಲು ನ್ಯಾಯಾಲಯಕ್ಕೆ ದಾಖಲು ಕೊಟ್ಟಿರುತ್ತೇನೆ. ಸದರಿ ವ್ಯವಹಾರದ ಬಗ್ಗೆ ನಾನು ಗ್ರಾಮ ಪಂಚಾಯಿತಿಯಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಆರೋಪಿಗೆ ನಾನು ಯಾವ ಮುಖ ಬೆಲೆ ನೀಡಿರುತ್ತೇನೆಂದು ನೆನಪಿರುವುದಿಲ್ಲ. ಆರೋಪಿ ನನಗೆ 9 ತಿಂಗಳಿನಲ್ಲಿ 7-10 ದಿನಾಂಕವನ್ನು ನಮೂದಿಸಿ ನನಗೆ ಚೆಕ್ಕು ಕೊಟ್ಟಿರುತ್ತಾರೆ. ಸದರಿ ಚೆಕ್ಕು ನಂಬರ್ 166126 ಎಂದು ಇರುತ್ತದೆ. ಆರೋಪಿ ದಿನಾಂಕಃ20-06-2017 ರಂದು ನಿಮ್ಮ ಹೆಂಡತಿಗೆ ನಿಪಿ-1 ನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಆರೋಪಿಯು ಗೃಹಿಣಿಯಾಗಿರುದರಿಂದ ಹಾಗೂ ಆರೋಪಿಯ ಗಂಡ ಸ್ವಯಂ ಕೃಷಿ ಸಹಕಾರ ಸಂಘದ ಪಿಗ್ಮಿ ಏಜೆಂಟ ಆಗಿದ್ದು ಸದರಿ ಸಂಘಕ್ಕೆ ನೀವು ಪಿಗ್ಮಿ ಹಣ ತುಂಬಿದ್ದು ಸದರಿ ಸಂಘ ಮುಚ್ಚಿ ಹೋದ ನಂತರ ಆರೋಪಿಯ ಗಂಡ ಮನೆಯಲ್ಲಿ ಇಲ್ಲದ ಸಮಯದಲ್ಲಿ ಆರೋಪಿಯನ್ನು ಹೆದರಿಸಿ ಆರೋಪಿಯಿಂದ ನೀವು ನಿಪಿ-1 ನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ಪಿಗ್ಮಿ ವ್ಯವಹಾರ ಬಿಟ್ಟು ಆರೋಪಿ ಹಾಗೂ ನಮ್ಮಗಳ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಸ್ವಯಂ ಕೃಷಿ ಸಹಕಾರ ಸಂಘ ಮುಚ್ಚಿ ಹೋಗಿದ್ದರು ಸಹ ನೀವು ಕಟ್ಟಿದ ಹಾಣವನ್ನು ವಾಪಸ್ಸು ಕೊಟ್ಟರು ಸಹ ನಿಪಿ-1 ನ್ನು ದುರ್ಬಳಕೆ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸ್ವಯಂ ಕೃಷಿ ಸಹಕಾರ ಸಂಘ ಮುಚ್ಚಿದ ನಂತರ ನೀವು ಇಸ್ಕಾ ಕಂಪನಿಯಲ್ಲಿ ಪಿಗ್ಮಿ ತುಂಬಿರುತ್ತೇವೆಂದರೆ ಸಾಕ್ಷಿಯು ಕಂಪನಿಯ ಹೆಸರು ಗೊತ್ತಿಲ್ಲ ಆದರೆ ಆರೋಪಿಯ ಗಂಡ ಪಿಗ್ಮಿ ಏಜೆಂಟ್ ಆಗಿರುವುದರಿಂದ ನಾನು ಪಿಗ್ಮಿ ತುಂಬಿದ್ದೇನು ಎಂದು ನುಡಿಯುತ್ತಾರೆ. ಸದರಿ ಕಂಪನಿಯಲ್ಲಿ ಆರೋಪಿಯ ಗಂಡನ ಮೂಲಕ 1,00,000 ಸಾಲವನ್ನು ಪಡೆದರುತ್ತೇನೆಂದರೆ ಸರಿಯಲ್ಲ ಸದರಿ 1,00,000 ಹಣದಲ್ಲಿ 40,000 ಮರಳಿ ತುಂಬಿದ್ದು ಇನ್ನೂ 60,000/- ಬಾಕಿ ಇದೆ ಎಂದರೆ ಸರಿಯಲ್ಲ. ಸದರಿ ಕಂಪನಿಯು ಸಹ ಮುಚ್ಚಿ ಹೊಗಿದ್ದರಿಂದ 60,000/- ವಾಪಸ್ಸು ತುಂಬಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಂಪನಿಯಲ್ಲಿ ನಾನೇ ಸಾಲವನ್ನು ಪಡೆದಿರುವುದರಿಂದ ಬೇರೆದವರಿಗೆ ಸಾಲ ಕೊಡಲು ಯೋಗ್ಯನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು